ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ತೀರ್ಥರಾಮೇಶ್ವರ ಮತ್ತು ಸಪ್ತಮಾತೃಕಾ ಕ್ಷೇತ್ರ ದರ್ಶನ

**ಶ್ರೀ ವೈ.ಎನ್.ಜಗದೀಶ್**

**ಭಾಗ-1 :**

ಶ್ರೀಮತಿ ಲತಾ ಶ್ರೀಧರ ಅವರು ನನ್ನನ್ನು ದಿನಾಂಕ 23.9.2022 ರಂದು, ತೀರ್ಥರಾಮೇಶ್ವರ ಮತ್ತು ಸಪ್ತಮಾತೃಕಾ ಕ್ಷೇತ್ರಕ್ಕೆ ಪ್ರವಾಸ ಮಾಡಿದ ಬಗ್ಗೆ ನನ್ನ ಅನಿಸಿಕೆಯನ್ನು ಬರೆದು ಕಳಿಸಿ ಎಂದು ಕೇಳಿಕೊಂಡರು.

ಇದಕ್ಕೆ ಮೊದಲು 2019 ವರ್ಷದಲ್ಲಿ ಶ್ರೀಮತಿ ಲತಾರವರು, ನನ್ನನ್ನು ನಾವು ತೀರ್ಥರಾಮೇಶ್ವರ ಕ್ಷೇತ್ರಕ್ಕೆ ಅಥವಾ ಸಂಗಮ ಕ್ಷೇತ್ರಕ್ಕೆ, ಯಾವುದಕ್ಕೆ ಹೋಗೋಣವೆಂದು ಕೇಳಿದ್ದಕ್ಕೆ ಎರಡೂ ಕ್ಷೇತ್ರ ದರ್ಶನಗಳೂ ಮುಖ್ಯವಾದದ್ದೇ ಎಂದರು. ಸಂಗಮ ಕ್ಷೇತ್ರಕ್ಕೆ ಹೋಗೋಣವೆಂದು ಹೇಳಿದೆ. ಆ ಕ್ಷೇತ್ರದ ಪ್ರವಾಸದ ವಿವರ ಬರೆಯುವುದು ನನ್ನ ಕರ್ತವ್ಯ.

ಅದೇ ಪ್ರಕಾರ ಶ್ರೀಮತಿ ಲತಾ ಶ್ರೀಧರ ಅವರ ಸಕಲ ಪೂರ್ವ ಸಿದ್ಧತೆಯೊಂದಿಗೆ ಮತ್ತು ಸುಸಜ್ಜಿತ ವಾಹನದಲ್ಲಿ, ಶ್ರೀಧರ ಅವರ ಮಾರ್ಗದರ್ಶನದಲ್ಲಿ ದಿನಾಂಕ 6.2.2019 ರಂದು ಸಂಗಮ ಕ್ಷೇತ್ರಕ್ಕೆ ನಾನು ನನ್ನ ಪತ್ನಿಯ ಸಮೇತ ಉದಯದಲ್ಲೇ ಪ್ರಯಾಣ ಬೆಳೆಸಿದೆವು. ಪ್ರಯಾಣ ಸುಗಮವಾಗಿ ಸಾಗಿತು.

ಈ ಕ್ಷೇತ್ರದ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಈ ಕ್ಷೇತ್ರ ಶ್ರೀ ಗಣಪತಿ ಸಚ್ಚಿದಾನಂದ ಸದ್ಗುರುಗಳು ಜನಿಸಿದ ಪವಿತ್ರ ಸ್ಥಳ ಮತ್ತು ಅವರ ಮಾತೃಶ್ರೀ ಹಾಗೂ ಗುರುಗಳಾದ ಶ್ರೀಜಯಲಕ್ಷ್ಮಿ **"ಮಾತಾ ತಪೋಭೂಮಿ"** ಯಾಗಿದೆ. ಕಾವೇರಿ, ಅರ್ಕಾವತಿ, ಗುಪ್ತಗಾಮಿನಿ ಈ ಮೂರು ಪವಿತ್ರ ನದಿಗಳು ಸಂಗಮಿಸಿದ ಸ್ಥಳವಾಗಿದೆ. ಪ್ರಕೃತಿಯ ಸೊಬಗಿನಿಂದ ತುಂಬಿಹೋಗಿರುವ ಈ ಸ್ಥಳದ ದರ್ಶನವೇ ಪುಣ್ಯ. ಈ ಸ್ಥಳದಲ್ಲಿ ಶ್ರೀದತ್ತಾತ್ರೇಯ ಸಂಚಾರವಿರುತ್ತದೆ. ನಾವುಗಳು ಕಾವೇರಿ ನದಿಯಲ್ಲಿ ಇಳಿದು, ನದಿಪೂಜೆಯನ್ನು ಶ್ರೀಮತಿ ಲತಾ ಮತ್ತು ನನ್ನ ಪತ್ನಿ ಮಾಡಿ ಪುನೀತರಾದರು. ನದಿಪೂಜೆಯ ನಂತರ ಶ್ರೀ ವಿಘ್ನೇಶ್ವರ ಸ್ವಾಮಿ, ಶ್ರೀ ದತ್ತಕಾಶೀಶ್ವರ, ಉದ್ಭವ ಶ್ರೀ ವೈದ್ಯನಾಥೇಶ್ವರ ಲಿಂಗ, ಪಂಚಮುಖ ಆಂಜನೇಯಸ್ವಾಮಿ, ವನದುರ್ಗಾದೇವಿ ಮತ್ತು ಶ್ರೀ ಸದ್ಗುರು ಪಾದುಕಾ ದರ್ಶನ ಮಾಡಿ ಪುನೀತರಾದೆವು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಯವರು, ಈ ಕ್ಷೇತ್ರವು ಎರಡನೇ ಗಾಣಗಾಪುರವೆಂದೂ, ಇಲ್ಲಿ ಸಂಗಮಸ್ನಾನ ಮಾಡಿ, ಶ್ರೀ ಉದ್ಭವ ವೈದ್ಯನಾಥೇಶ್ವರ ಲಿಂಗಕ್ಕೆ ಒದ್ದೆ ಬಟ್ಟೆಯಲ್ಲೇ ಯಾರು ನದಿ ನೀರನ್ನು

ತಂದು ಅಭಿಷೇಕ ಮಾಡುತ್ತಾರೋ ಅವರ ಸರ್ವವ್ಯಾಧಿಗಳೂ ನಿವಾರಣೆಯಾಗುತ್ತವೆ ಎಂದು ಅನುಗ್ರಹ ಮಾಡಿರುತ್ತಾರೆ.

ಇಂತಹಾ ಪುಣ್ಯಕ್ಷೇತ್ರದ ದರ್ಶನವನ್ನು ನಮಗೆಲ್ಲಾ ಮಾಡಿಸಿದ ಪುಣ್ಯ ಶ್ರೀಮತಿ ಲತಾ ಶ್ರೀಧರ ಇವರಿಗೆ ಇರುವುದರಲ್ಲಿ ಸಂಶಯವೇ ಇಲ್ಲವೆಂದೂ ಮತ್ತು ಶ್ರೀ ಸದ್ಗುರು ದತ್ತಾತ್ರೇಯರ, ಶ್ರೀ ಜಯಲಕ್ಷ್ಮಿ ಮಾತಾರವರ ಮತ್ತು ಇಲ್ಲಿ ನೆಲೆಸಿರುವ ಎಲ್ಲಾ ದೇವರ ಅನುಗ್ರಹ ಅವರಿಗೆ ಆಗಲೆಂದು ನಾನು ಮತ್ತು ನನ್ನ ಪತ್ನಿ ಆ ಸದ್ಗುರುವಿನಲ್ಲಿ ಪ್ರಾರ್ಥನೆ ಮಾಡುತ್ತೇವೆ.

ಈ ಸಂದರ್ಭದಲ್ಲಿ ನಮ್ಮಗಳಿಗೆ ಸಕಲ ಸೌಕರ್ಯಗಳನ್ನು ಏರ್ಪಾಡು ಮಾಡಿ ಸಹಕಾರ ನೀಡಿದ ಸದ್ಗುರುಗಳ ಭಕ್ತರಾದಂತಹಾ ಶ್ರೀ ಹರಿಪ್ರಸಾದರ ಸ್ಮರಣೆ ಮಾಡಬೇಕಾದ್ದೇ ಆಗಿದೆ.

## ಭಾಗ-2 :

ಶ್ರೀಮತಿ ಲತಾ ಶ್ರೀಧರ ಅವರು ತಮ್ಮ ಪೂರ್ವಸಿದ್ಧತೆಯೊಂದಿಗೆ ದಿನಾಂಕ 23.9.2022 ರಂದು ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ಶ್ರೀ ಬಾಲರಾಜರಾಜೇಶ್ವರಿ ಸಮೇತ ಶ್ರೀರಾಮೇಶ್ವರಸ್ವಾಮಿ ಕ್ಷೇತ್ರಕ್ಕೆ ಮತ್ತು ಶ್ರೀ ಸಪ್ತಮಾತೃಕಾ ದೇವಸ್ಥಾನಕ್ಕೆ ಹೋಗಲು ಸಿದ್ಧರಾಗಿ ನಮ್ಮನ್ನು ಆಹ್ವಾನಿಸಿದರು.

ನನಗೆ ಇನ್ನೊಮ್ಮೆ ವಿಸ್ತಾರವಾಗಿ ನಮ್ಮ ಹಿರಿಯರಿಗೆ ಅನುಗ್ರಹ ಮಾಡಿದ್ದ ಕ್ಷೇತ್ರಕ್ಕೆ ಹೋಗಲು ನನ್ನ ವಯಸ್ಸು ತಡೆಯಾದರೂ ದೇವರಲ್ಲಿ ಭಾರಹಾಕಿ ಹೊರಡಲು ಸಿದ್ಧವಾಗಿ, ನನ್ನ ಪತ್ನಿಯನ್ನು ಕರೆಯಲು, ಅವರು, “ನೀವು ಹೋಗಿಬನ್ನಿ ನನಗೆ ಆರೋಗ್ಯ ಸರಿ ಇಲ್ಲ” ಎಂದು ಹೇಳಿದರು.

ನಾನು ಮತ್ತು ನನ್ನ ಪತ್ನಿ ಈ ಹಿಂದೆ, ಅಂದರೆ ದಿನಾಂಕ 5.5.2002 ರಲ್ಲಿ ನನ್ನ ಸ್ನೇಹಿತನಾದ ಸಿಇಟಿ ಶ್ರೀನಿವಾಸ ಅವರೊಂದಿಗೆ ಮೇಲ್ಕಂಡ ಎರಡೂ ಕ್ಷೇತ್ರಗಳಿಗೆ ಹೋಗಿದ್ದೆವು. ಆಗ, ಶ್ರೀ ರಾಮೇಶ್ವರ ಸ್ವಾಮಿಯ ದರ್ಶನ ಮಾಡಿಕೊಂಡು, ಸಮೀಪದಲ್ಲಿದ್ದ ಶ್ರೀ ಸಪ್ತಮಾತೃಕಾ ದೇವಸ್ಥಾನಕ್ಕೆ ಹೋಗಿದ್ದಾಗ, ಅಲ್ಲಿ ಶ್ರೀ ಉಮಾ ಶಂಕರ ಎನ್ನೋ ಅರ್ಚಕರು ಪೂಜೆ ಮಾಡಿ ಕೊಟ್ಟಿದ್ದರು. ನನ್ನ ಪತ್ನಿ, ನಾನು ಶ್ರೀದೇವಿಯ ಸನ್ನಿಧಿಯಲ್ಲಿ ಶ್ರೀ ಲಲಿತಾ ಸಹಸ್ರನಾಮವನ್ನು ಪಠಿಸಿದ್ದೆವು.

ನನ್ನ ಸ್ನೇಹಿತ ಶ್ರೀನಿವಾಸನ ತಂದೆಯವರ ಸ್ಥಳ ಸಮೀಪದ ಕಂದಿಕೆರೆ. ಅಲ್ಲಿ ಟೀಚರ್ ಆಗಿದ್ದರು. ಈ ಸಪ್ತಮಾತೃಕಾ ದೇವಿಯು ಬಹಳ ಮಹಿಮೆಯುಳ್ಳ ದೇವಿಯೆಂದು ಹೇಳಿದ್ದರು.

ದಿನಾಂಕ 23.9.2022 ರಂದು ಪ್ರಯಾಣ ಸುಗಮವಾಗಿ ಸಾಗಿತು. ಪ್ರಯಾಣದಲ್ಲಿ ಶ್ರೀಮತಿ ಲತಾರವರು ನನ್ನ ಕೈಗೆ ಸ್ಪೀಕರ್ ಕೊಟ್ಟು, ಭಕ್ತಿಯಿಂದ ದೇವರ ಹಾಡುಗಳನ್ನು ಕೇಳುವಂತೆ ಮಾಡಿದರು. ಶ್ರೀಧರ ಅವರು ಬೆಳಗ್ಗೆ 9 ಗಂಟೆಗೆ ಉತ್ತಮವಾದ ಹೊಟೆಲ್ ನಲ್ಲಿ ಉಪಹಾರ ಮಾಡಿಸಿದರು.

ಅಲ್ಲಿಂದ ಮುಂದಕ್ಕೆ ಚಿಕ್ಕನಾಯಕನ ಹಳ್ಳಿಯಿಂದ ಒಳಮಾರ್ಗದಲ್ಲಿ ಸುಮಾರು ದೂರ ಸಾಗುತ್ತಾ, ಚಾಲಕನ ಯುಕ್ತಿಯಿಂದ ಎಲ್ಲಾ ರಸ್ತೆಯ ಮಾರ್ಗವನ್ನು ದಾಟಿ, ಸುಮಾರು ಬೆಳಗ್ಗೆ 11 ಗಂಟೆಗೆ ತೀರ್ಥ ರಾಮೇಶ್ವರ ಕ್ಷೇತ್ರವನ್ನು ತಲುಪಿದೆವು.

ಶ್ರೀಮತಿ ಲತಾ ಶ್ರೀಧರ ಇವರು ಕುತೂಹಲದಿಂದ ದೇವಸ್ಥಾನದ ಪಕ್ಕದಲ್ಲಿ ಉಗಮವಾಗಿ ಹರಿಯುತ್ತಿರುವ ನೀರಿನ ಸೊಬಗನ್ನೂ, ಶಿಲಾಶಾಸನದ ಅಶ್ವತ್ಥ ಕಟ್ಟೆಯನ್ನೂ ನೋಡಿ, ಅದರ ವಿವರಗಳನ್ನು ಕೇಳಿ ತಿಳಿದರು.

ನಂತರ ಶ್ರೀಮತಿ ಲತಾ ಅವರ ಪೂರ್ವ ಸಿದ್ಧತೆಯ ಪ್ರಕಾರ ಅರ್ಚಕರೂ ನಮ್ಮನ್ನು ಪ್ರೀತಿಯಿಂದ ಬರಮಾಡಿಕೊಂಡು ದೇವರ ದರ್ಶನವನ್ನು ಮಾಡಿಸಿದರು. ನಾವು ನನ್ನ ತಮ್ಮ ಶ್ರೀಧರ, ಅವರೊಂದಿಗೆ ಆತ್ಮೀಯವಾಗಿ ಫೋಟೋ ತೆಗೆಸಿಕೊಂಡು, ಸ್ನೇಹದಿಂದ ಮಾತಾಡಿ ಎಲ್ಲಾ ವಿವರ ತಿಳಿದುಕೊಂಡೆವು.

ಈ ಶ್ರೀ ಬಾಲ ರಾಜರಾಜೇಶ್ವರಿಯ ಸಮೇತನಾದ ಶ್ರೀ ರಾಮೇಶ್ವರ ಸ್ವಾಮಿಯ ದೇವಾಲಯವನ್ನು ಶ್ರೀ ವಿದ್ಯಾರಣ್ಯರು ಪ್ರತಿಷ್ಠಾಪಿಸಿ, ನಲವತ್ತು ದಿನಗಳ ಕಾಲ ಮಂಡಲ ಪೂಜೆಯನ್ನು ಮಾಡಿ, ಜನ್ಮಾಂತರದಲ್ಲಿ ಪಾಳೇಗಾರರಾಗಿದ್ದ ನಮ್ಮ ತಾತನವರನ್ನು ಅನುಗ್ರಹಿಸಿ, ಶ್ರೀ ರಾಮೇಶ್ವರನಲ್ಲೂ, ಶ್ರೀ ಬಾಲ ರಾಜರಾಜೇಶ್ವರಿಯಲ್ಲೂ ಭಕ್ತಿಯನ್ನು ಬೆಳೆಸಿ ಅನುಗ್ರಹ ಮಾಡಿದ ವಿಚಾರವನ್ನು ನಮ್ಮ ತಾತನವರು ಅವರು ಬರೆದ "ಶ್ರೀ ರಾಮಾಯಣ ಅಂತರಾರ್ಥ" ಎಂಬ ಗ್ರಂಥದಲ್ಲಿ ವಿವರವಾಗಿ ಬರೆದುಕೊಂಡಿದ್ದಾರೆ.

ಶ್ರೀ ರಾಮೇಶ್ವರ ಸ್ವಾಮಿಗೆ ನಮಸ್ಕಾರ ಮಾಡಿ, ನಂತರ ನಾನು ಅರ್ಚಕರಿಗೆ ಕಾರ್ತೀಕ ಮಾಸದಲ್ಲಿ  ನಮ್ಮೆಲ್ಲರ ಹೆಸರಿನಲ್ಲಿ ಅಭಿಷೇಕ ಮಾಡಿಸಲು ಕೇಳಿಕೊಂಡೆ. ಅರ್ಚಕರು ಒಪ್ಪಿಕೊಂಡರು.

ನಂತರ ವಾಹನದಲ್ಲಿ ಹಳ್ಳಿ ರಸ್ತೆಯಲ್ಲೇ ದುರ್ಗಮವಾಗಿರತಕ್ಕ ಪ್ರದೇಶದಲ್ಲಿ, ಶ್ರೀ ವಿದ್ಯಾರಣ್ಯರಿಂದ ಸುಮಾರು 650 ವರ್ಷಗಳ ಹಿಂದೆ ಪ್ರತಿಷ್ಠೆ ಮಾಡಿದ ಶ್ರೀ ಸಪ್ತಮಾತೃಕಾ ದೇವಸ್ಥಾನಕ್ಕೆ ಕಡಿದಾದ ನಲವತ್ತು ಮೆಟ್ಟಲುಗಳನ್ನು ಹತ್ತಿಕೊಂಡು, ಭಕ್ತಿಯಿಂದ, ಶ್ರೀಮತಿ ಲತಾರವರ ಆಧಾರದೊಂದಿಗೆ ಮೆಟ್ಟಲುಗಳನ್ನು ಹತ್ತಿ, ನಾವುಗಳು ಶ್ರೀದೇವಿಯ ಸನ್ನಿಧಾನಕ್ಕೆ ತಲುಪಿದೆವು.

ಮಹಿಮಾನ್ವಿತ ಶ್ರೀ ಸಪ್ತಮಾತೃಕಾ ದೇವಸ್ಥಾನದಲ್ಲಿ ಶ್ರೀ ಅಮ್ಮನವರ ಸುಂದರ ವಿಗ್ರಹವನ್ನು ನೋಡಿ ಭಕ್ತಿಯಿಂದ ನನಗೆ ಬರುವ ಸ್ತೋತ್ರಗಳನ್ನು ಹೇಳಿಕೊಂಡು ಮನಸ್ಸಿನಲ್ಲಿ ನಮಿಸಿದೆ.

ಶ್ರೀಮತಿ ಲತಾ ಶ್ರೀಧರ ಇವರು ಭಕ್ತಿಯಿಂದ ದೇವರನ್ನು ವೀಕ್ಷಿಸಿ, ನಮಸ್ಕರಿಸಿದರು. ಶ್ರೀಮತಿ ಲತಾರವರು ದೇವಿಯನ್ನು ಪೂಜಿಸಿ, ಏಳು ಸಂಖ್ಯೆಯಲ್ಲಿ ಮಂಗಳದ್ರವ್ಯಗಳನ್ನು, ಏಳು ತೆಂಗಿನ ಕಾಯಿಗಳನ್ನು, ಏಳು ಗೆಜ್ಜೆ ವಸ್ತ್ರಗಳು, ಏಳು ಫಲಗಳು, ಇತ್ಯಾದಿ ವಸ್ತುಗಳನ್ನು ಭಕ್ತಿಪೂರ್ವಕವಾಗಿ, ಶಾಸ್ತ್ರೋಕ್ತವಾಗಿ ಶ್ರೀದೇವಿಗೆ ಅರ್ಪಿಸಿದರು. ನಾವುಗಳೆಲ್ಲಾ ಧನ್ಯಭಾವವನ್ನು ಅನುಭವಿಸಿದೆವು, ಮತ್ತು ದೇವಸ್ಥಾನದ ಸುತ್ತಮುತ್ತ ಪ್ರದೇಶದ ಪ್ರಕೃತಿ ಸೌಂದರ್ಯವನ್ನು ನೋಡಿ ಸಂತೋಷಪಟ್ಟೆವು. ಎಲ್ಲವನ್ನೂ ವರ್ಣಿಸಲು ಅಸಾಧ್ಯ.

ಈ ಪುಣ್ಯ ಕ್ಷೇತ್ರಗಳಿಗೆ ದರ್ಶನ ಮಾಡಿಸಿದ ಶ್ರೀಮತಿ ಲತಾ ಹಾಗೂ ಶ್ರೀ ಶ್ರೀಧರ ಅವರುಗಳಿಗೆ ಶ್ರೀ ಬಾಲ ರಾಜರಾಜೇಶ್ವರಿ ಸಮೇತ ಶ್ರೀ ರಾಮೇಶ್ವರಸ್ವಾಮಿಯ ಕೃಪೆ ಮತ್ತು ಶ್ರೀ ಸಪ್ತಮಾತೃಕಾ ದೇವಿಯರ ಅನುಗ್ರಹವು ಅವರಿಗೂ ಅವರ ಮಕ್ಕಳಿಗೂ ಆಗಲೆಂದು ನಾನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಸುಮಾರು ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಅದೇ ಉತ್ತಮವಾದ ಹೋಟೆಲ್ ನಲ್ಲಿ ಭೋಜನಕ್ಕೆ ಏರ್ಪಾಡು ಶ್ರೀಧರ ಅವರು ಮಾಡಿದ್ದರು. ನಂತರ, ಆ ದೇವದೇವಿಯರ ದರ್ಶನದ ಧನ್ಯತಾ ಭಾವದಿಂದ, ಸುಖ ಪ್ರಯಾಣದಿಂದ ಸಂಜೆ ಆರು ಗಂಟೆಯ ಹೊತ್ತಿಗೆ ಮೈಸೂರಿಗೆ ಕ್ಷೇಮವಾಗಿ ತಲುಪಿದೆವು.

-------x-------x-------